ವಿಷಯ (ಈ) ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸುಮಾರು ೮೫ ದಿನಗೂಲಿ

ನೌಕರನ್ನು ದಿನಾಂಕ ೧೨-೧೨-೨೦೦೬ ರಂದು ಏಕಾಮೇಕಿ ಕೆಲಸದಿಂದ

ತೆಗೆದುಹಾಕಿರುವ ಬಗ್ಗೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸುಮಾರು ೮೫ ಜನರು ೧೬ ವರ್ಷಗಳಿಂದ daily wages ನಲ್ಲಿ ಕೆಲಸ ಮಾಡುತ್ತಿದ್ದರು ಅವರೆಲ್ಲರೂ ಕನ್ನಡಿಗರು ಅವರುಗಳನ್ನು ದಿನಾಂಕ ೧೨-೧೨-೨೦೦೬ರಲ್ಲಿ ಏಕಾಏಕಿ ಕಿತ್ತು ಹಾಕಿ ಅವರ ಜಾಗಗಳಿಗೆ ಕೇರಳದವರನ್ನು appointment ಮಾಡಿದ್ದಾರೆ ಇದು ಅಲ್ಲಿನ ೮೫ ಜನರಿಗೆ, ಅವರುಗಳಿಗೆ ಯಾವುದೇ ವಿಧವಾಗಿ ಬೋನಸ್ ಕೊಡುವುದಾಗಿರಬಹುದು, ಅಥವಾ ಅವರುಗಳಿಗೆ ಏನೇನು ಕೊಡಬೇಕೋ, ಅದನ್ನೂ ಕೊಡದೇ, ರಾತ್ರೋರಾತ್ರಿ ಅವರುಗಳನ್ನು ಮನೆಗೆ ಕಳುಹಿಸಿದ್ದಾರೆ ಇವರುಗಳೆಲ್ಲರೂ ಕನ್ನಡಿಗರಾಗಿ ಇಲ್ಲಿಯರೇ ಆಗಿದ್ದು ನಮ್ಮ ರಾಜ್ಯದವರೇ ಆಗಿರುವುದರಿಂದ ಈಗ ೮೫ ಜನರೂ ಅಲ್ಲಿ ೧೬ ವರ್ಷಗಳಿಂದ ಸೇವೆ ಸಲ್ಲಿಸಿದ್ದು, ಕೇವಲ ನಂತರ ಅವರನ್ನು ಕಿತ್ತು ಹಾಕಿದ್ದಾರೆ, ಅವರ ಪಾಡಿಗೆ ಅವರು ನೋಡಿಕೊಳ್ಳುತ್ತಿದ್ದರು ಅವರೆಲ್ಲರೂ ಕನ್ನಡಿಗರೇ ಆಗಿದ್ದಾರೆ ಅವರುಗಳನ್ನು ಮತ್ತೆ ಮರು ನೇಮಕ ಮಾಡಿಕೊಂಡು permanent ಮಾಡುವಂತೆ ನಮ್ಮ ಸರ್ಕಾರ ಅವರ ಮೇಲೆ ಒತ್ತಡ ಹೇರಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ By chance, ಕೋರ್ಟ್‌ಗೆ ಹೋಗಬೇಕಾದರೆ, ನಮ್ಮ ಕಾರ್ಮಿಕ ಮಂತ್ರಿಗಳೇ ಅದಕ್ಕೆ ಅರ್ಜಿ ಹಾಕಲಿ ಪಾಪ! ಅವರೆಲ್ಲರೂ labourers ಅವರುಗಳಿಗೆ ಅಷ್ಟು ತಿಳುವಳಿಕೆ ಇಲ್ಲ ಆ ತಿಳಿವಳಿಕೆ ಇಲ್ಲದೇ ಇರುವುದರಿಂದ ಸರ್ಕಾರವೇ ಯಾವ ಕೋರ್ಟಿಗೆ ಹೋಗಬೇಕೋ ಹೋಗಲಿ, ನೀವು ಕೊಟ್ಟಿರುವ ಉತ್ತರವನ್ನು ಓದಿದ ಮೇಲೆ ಮತ್ತೆ ತಮ್ಮನ್ನು ಕೇಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ, ಮತ್ತು ???????????????//?????? ಕೈಗಾರಿಕಾ ವಿವಾದ ಕಾಯ್ದಕೆಯ ಸೆಕ್ಷನ್ ೨(ಎ) ರಡಿಯಲ್ಲಿ ಶ್ಯಾಖ್ಯಾನಿಸುವಂತೆ ಕೇಂದ್ರ ಸರ್ಕಾರವು " ನಕ್ಷಮ ಸರ್ಕಾರ" ಆಗಿರುತ್ತದೆ ಸದರಿ ಸಂಸ್ಥೆಯ ಬಗ್ಗೆ ಯಾವುದೇ ಕೈಗಾರಿಕಾ ವಿಚಾರಗಳು ಉದ್ಭವವಾದಲ್ಲಿ ಅಂತಹ ವಿವಾದಗಳನ್ನು ಉದ್ಭವವಾದಲ್ಲಿ ಅಂತಹ ವಿವಾದಗಳನ್ನು ಕುಂತು ಸಂಧಾನ ವಿಚಾರಣೆ ನಡೆಸುವ ಅಧಿಕಾರ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಗೆ ಇರುತ್ತದೆ

ಹಾಗೆಯೇ ಗುತ್ತಿಗೆ ಕಾರ್ಮಿಕ (ರದ್ಧತಿ ಮತ್ತು ನಿಯಂತ್ರಣ) ಕಾಯ್ದಕೆಯ ಸೆಕ್ಷನ್ ೨(೧)(ಎ)ರಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಈ ಸಂಸ್ಥೆಗೆ ಮತ್ತು ಇಂಡಿಯನ್ ಏರ್ ಲೈನ್ಸ್ ಗೆ ಸರ್ಕಾರವು ಸಕ್ಷಮ ಸರ್ಕಾರ ಆಗಿರುತ್ತದೆ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರ ಬಗ್ಗೆ ವಿಚಾರಣೆ ಮಾಡುವ ಅಧಿಕಾಖು ಕೂಡ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಗೆ ಇರುತ್ತದೆ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ೩೫೫ ಕನ್ನಡಿಗ ದಿನಗೂಲಿ ನೌಕರರನ್ನು ದಿನಾಂಕ ೧೨-೧೨-೨೦೦೬ ರಂಗು ಏಕಾ ಏಕಿ ಕೆಲಸದಿಂದ ತೆಗೆದುಹಾಕಿರುವ ಬಗ್ಗೆ ಬೆಂಗಳೂರಿನಲ್ಲಿರುವ ಕೇಂದ್ರ ಸರ್ಕಾರದ ಕಾರ್ಮಿ ಇಲಾಖೆಯ ಅಧಿಕಾರಿಯವರು ಈ ಕಾರ್ಮಿಕರ ವಿವಾದದ ಬಗ್ಗೆ ಇಲ್ಲಿಯವರೆವಿಗೂ ಯಾವ ಕಾರ್ಮಿಕನರೂ ಕೂಡ ಮನವಿಗಳನ್ನು ಅವರ ಕಚೇರಿಗೆ ಸಲ್ಲಿಸಿಲ್ಲೆಂಬುದಾಗಿ ಮೌನವಾಗಿ ತಿಳಿಸಿರುತ್ತಾರೆ

* ೧೧೧ ಜನ ದಂಗಾಮಿ ಕಾರ್ಮಿಕರನ್ನು ಸಂಸ್ಥೆಯ ಗ್ರೌಂಡ್ ಹ್ಯಾಂಡ್ಲೀಗ್ ಆಕ್ಟಿವಿಟಿ

ಸಲುವಾಗಿ ಅಂದರೆ ವಿಮಾನದಲ್ಲಿ ಪ್ರಯಾಣಿಕರ ಲಗೇಜನ್ನು ಲೋಡಿಂಗ್, ಅನ್ ಲೋಡಿಂಗ್ ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗಿತ್ತು

* ಸಂಸ್ಥೆಯ ಇತ್ತೀಚಿನ ನೀತಿಯಿಂದಾಗಿ ನಾನ್ ಕೋರ್ ಸ್ವರೂಪದ ಕೆಲಸಗಳನ್ನು ಹೊರಗುತ್ತಿಗೆ ಮಾಡಲು ನಿರ್ಧರಿಸಿದ್ದರಿಂದ ದಿನಾಂಕ ೧೨.೧೨.೨೦೦೬ ರಿಂದ ಈ ಕೆಲಸವನ್ನು ಮೆ ಅಂಬಿಯನ್ಸ್ ಅಸೋಸಿಯೇಟ್ಸ್, ನಂ ೮೪ ನಂಜಪ್ಪ ಲೇಔಟ್, ವಿದ್ಯಾರಣ್ಯ ಪುರ, ಬೆಂಗಳೂರು – ೯೭ ಎಂಬ ಗುತ್ತಿಗೆದಾರುಗೆ ನೀಡಲಾಗಿದೆ ಈ ಗುತ್ತಿಗೆದಾರರು ಈಗ ಬೇರೆ ೫೦ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ಮಾಡಿಸುತ್ತಿದ್ದಾರೆ

* ಬಂಗಾಮಿ ಕಾರ್ಮಿಕರಾದ ಶ್ರೀ ರಮೇಶ್ ಮತ್ತು ಇತರೆ ೧೧೦ ಕಾರ್ಮಿಕರು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ ೩೬೯೫/೨೦೦೪, ದಿನಾಂಕ ೩೧-೦೮-೨೦೦೪ ರಲ್ಲಿ ಸಲ್ಲಿಸಿದ್ದು, ಅವರನ್ನು ಇಂಡಿಯನ್ ಏರ್ ಲೈನ್ಸ್, ಬೆಂಗಳೂರು ಈ ಸಂಸ್ಥೆಯಲ್ಲಿ ಖಾಯಂದ ನೌಕರರನ್ನಾಗಿ ನೇಮಿಸಿಕೊಳ್ಳಲು ಆದೇಶಕ್ಕಾಗಿ ಕೋರಿರುತ್ತಾರೆ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ಅವರೆಲ್ಲರೂ ಕನ್ನಡಿಗರೇ ಆಗಿದ್ದಾರೆ ಬೇರೆ ರಾಜ್ಯದಿಂದ ಇಲ್ಲಿಗೆ ಕರೆದುಕೊಂಡು ಬಂದು ಅವರನ್ನು ಹಂಗಾಮಿಯಾಗಿ ತೆಗೆದುಕೊಳ್ಳತಕ್ಕಂಥ ಅಗತ್ಯವೇನಿತುತ ? ಆ ತರಹ ಅವರೇನಾದರೂ

outsource ಮಾಡಿದ್ದರೆ ಇದೇ ನೌಕರರನ್ನು ತೆಗೆದುಕೊಂಡು ಕೆಲಸ ಮಾಡಿಸಲಿ ಇತ್ತೀಚೆಗೆ ಬೆಂಗಳೂರು ಕನ್ನಡಿಗರ, ರಾಜ್ಯದ ಕೇಂದ್ರ ಸ್ಥಾನ ಎಂಬುದರ ಬಗ್ಗೆ ನಮಗೆ ಅನುಮಾನಗಳು ಬರುತ್ತಿವೆ ಮೊದಲೆಲ್ಲಾ ತಮಿಳಿಯನ್ಸ್ ಬಹಳಷ್ಟು ಜನ ಇಲ್ಲಿಬೆ ಬಂದರು ಈಗ ಬಿಹಾರದವರು ಒರಿಸ್ಸಾದವರು ಮತ್ತು ಕೇರಳದವರೂ ಸಹ ಬರುತ್ತಿದ್ದಾರೆ ಈ ತರಹ ಆಗುತ್ತಿದ್ದ್ಯಎ, ಈ ಬೆಂಗಳೂರನ್ನು ಕನ್ನಡಿಗರ ರಾಜಧಾನಿ ಎಂದು ಹೇಳುಬೇಕೇ ಅಥವಾ ಬೇರೆ ಇನ್ನಾವುದಾದರೂ ರಾಜ್ಯದ ರಾಜಧಾನಿ ಎಂದು ಹೇಳಬೇಕೆ? ನನ್ನ ಸಲಹೆ ಏನೆಂದರೆ, ಸರ್ಕಾರವೇ ಈ ವಿಚಾರದಲ್ಲಿ ಕೋರ್ಟ್ ಅಥವಾ ಉಚ್ಚ ನ್ಯಾಯಾಲಯಕ್ಕೆ ಹೋಗುವಂತಹ ಕೆಲಸವಾಗಬೇಕು ನಮ್ಮ ಕನ್ನಡಿಗರ ಹೋರಾಟವನ್ನು, ಅವರ ಹಕ್ಕುಗಳನ್ನು ಸಾಧಿಸಲಿಕೆಕ ಸರ್ಕಾರವೇ ಕೋರ್ಟ್ ಗೆ ಹೋಗುವಂತಹ ಕೆಲಸವಾಗಬೇಕು ಯಾವುದಾದರೂ ಒಳ್ಳೆಯ ಸರಿಯಾದಂತಹ ವಕೀಲರನ್ನು ಇಟ್ಟು, ಕೇಸ್ ಹಾಕಿ ನೀವೇ ಅದನ್ನು ನಡೆಸಬೇಕೆಂದು ನಾನು ಕೋರುತ್ತೇನೆ ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿರುವುದರಿಂದ, ನನಗೆ ಇದರಡಿ ಹೆಚ್ಚಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲದೆಂದು ಗೊತ್ತಿದ್ದರೂ ಕುಡ, ಕನ್ನಡಿಗರಿಗೆ ಇಲ್ಲಿ ಅನ್ಯಾಯವಾಗಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಲಿಕ್ಕೆ ಇಷ್ಟಪಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ಈ ವಿಚಾರ ಇಂಡಿಯನ್ ಏರ್ಲೈನ್ಸ್ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಧಿಕಾಖದ ವ್ಯಪ್ತಿಗೆ ಬರುತ್ತದೆ ಅವರು ಇದರ ಉಸ್ತುವಾರಿ ನೋಡಿಕೊಳ್ಳುತ್ತಾರೆ ಈಗಾಗಲೇ ಅವರು ಮೆಃ ಅಂಬಿಯನ್ಸ್ ಅಸೋಸಿಯೇಟ್ಸ್ ಎಂಬ ಬೇರೊಂದು ಏಜೆನ್ಸಿಗೆ ಕೊಟ್ಟಿದ್ದಾರೆ ಕೆಲವರು ಈ ವಿಚಾರವಾಗಿ ಕೋರ್ಟ್ ಗೆ ಹೋಗಿ injunction ಅನ್ನು ತೆಗೆದುಕೊಂಡಿದ್ದಾರೆ ಇಲ್ಲಿ ಈ ತರಹದ ಸಮಸ್ಯೆಗಳಿವೆ ಗುತ್ತಿಗೆ ಆಧಾರದ ಮೇಲೆ ಅಲ್ಲಿ ಕನ್ನಡಿಗರು ಏನು ಕೆಲಸ ಮಾಡುತ್ತಿದ್ದಾರೋ, ಅವರಿಗೆ ಏನೊಂದು ರಕ್ಷಣೆಯನ್ನು ಕೊಡಬೆಕೋ, ಆ ಬಗ್ಗೆ ರಾಜ್ಯ ಸರ್ಕಾರ

ಕೇಂದ್ರ ಸರ್ಕಾರದ ಮೇಲೆ ಹಾಗೂ ಸಂಬಂಧಪಟ್ಟಂತಹ ಪ್ರಾಧಿಕಾರದ ಮೇಲೆ ಒತ್ತಾಯ ತರುವಂತಹ ಕೆಲಸವನ್ನು ಮಾಡುತ್ತದೆ

ಉಪಾಧ್ಯಕ್ಷರು ಮುಂದಿನ ವಿಷಯಗಳನ್ನು ಪ್ರಸ್ತಾಪಿಸಬೇಕಾದ ಮಾನ್ಯ ಸದಸ್ಯರುಗಳಾದ ಗೋಪಾಲಕೃಷ್ಣ ಬೇಳೂರು ಮತ್ತು ಮಾನ್ಯ ಸುನಿಲ್ ಕುಮಾರ್ ರವರು ಸದನದಲ್ಲಿ ಕಾಣುತ್ತಿಲ್ಲ ಆದ್ದರಿಂದ ಈಗ ಮಾನ್ಯ ರಮೇಶ್ ಕುಮಾರ್ ರವರ ವಿಚಾರ ತೆಗೆದುಕೊಳ್ಳೋಣ

ಊ] **ವಿಷಯ "ಸುವರ್ಣ ಗ್ರಾಮ" ಯೋಜನೆ ಅಡಿ ಗ್ರಾಮಗಳನ್ನು ಆಯ್ಕೆ ಮಾಡಿ ಹೊರಡಿಸಲಾದ ಪಟ್ಟಿಯಿಂದ ಮೂರು ಗ್ರಾಮಗಳನ್ನು ಕೈಬಿಟ್ಟು, ಹೊಸದಾಗಿ ಮೂರು ಗ್ರಮಗಳನ್ನು ಸೇರಿಸಿರುವ ಬಗ್ಗೆ**

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಧ ಉದಾಸಿಯವರು ಸದನದಲ್ಲಿ ಇರಬೇಕಾಗಿತ್ತು ಈ ವಇಚಾರ ಅವರ ಇಲಾಖೆಎ ಸಂಬಂಧಿಸಿದೆ ನನ್ನ ಮತಕ್ಷೇತ್ರದಲ್ಲಿ ಸುವರ್ಣ ಗ್ರಾಮಗಳ ಪಟ್ಟಿಯೊಂದನ್ನೇನು ಸರ್ಕಾರ ಅಧಿಕೃತವಾಗಿ ಹೊರಡಿಸಿತ್ತೋ, ಅದನ್ನು ಇಲ್ಲಿ ಆಸ್ವಾಸನೆ ಕೊಟ್ಟಧ ಮೇಲೆ, ಮತ್ತೆ ಮೊನ್ನೆ ಮೂರು ಗ್ರಾಮಗಳನ್ನು ಪಟ್ಟಿಯಿಂದ ಬದಲಾಯಿಸಿದ್ದಾರೆ

ಉಪಾಧ್ಯಕ್ಷರು ಮಾನ್ಯ ಧರ್ಮಸಿಂಗ್ ರವರು, ಮಾನ್ಯ ರಮೇಶ್ ಕುಮಾರ್ ರವರು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಡಿ ಕೆ ಶಿವಕುಮಾರ್ ರವರು ಮತ್ತು ಮಾನ್ಯ ಖರ್ಗೆಯವರು ದಕ್ಷಿಣ ಕನ್ನಡ ಜಿಲ್ಲೆಯ ಜೆ ಡಿ (ಎಸ್) ಮುಖಂಡರಾಗಿದ್ದ ವಸಂತ ಬಂಗೇರಾ ಅವರು ಅಬ್ಕಾರಿ ಬಗ್ಗೆ ನೀಡಿದ ಹೇಳಿಕೆ ಬಗ್ಗೆ ಚರ್ಚಿಸಲು ಸೂಚನೆ ಕೊಟ್ಟಿದ್ದೀರಿ

ಶ್ರೀ ಕೆ/ಆರ್ ರಮೇಶ್ ಕುಮಾಖ ಹೌದು, ನೋಟೀಸ್ ಕೊಟ್ಟಿದ್ದೇವೆ ಅದನ್ನು ನಾಳೆ ತೆಗೆದುಕೊಳ್ಳೋಣ ಅವರು ಇದದಾಗ ತೆಗೆದುಕೊಳ್ಳೋಣ